ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 4, Jan-Feb, 2023, Pp. 19-26.**
**©*IIMRD*, Mysuru**

IIMRD JOURNALS

**www.iimrd.com**

# ಗ್ರಾಮೀಣ ಸಂಸ್ಕೃತಿಯಲ್ಲಿ ಬೆರೆತು ಹಾರುವುದ ಮರೆತಹಕ್ಕಿ (ಕರಾವಳಿಯ ಹಿನ್ನಲೆ)

**ಡಾ. ಗಜಾನನ ನಾಯ್ಕ***

*ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

***ಸಾರಾಂಶ:(Abstract)***

*ನಮ್ಮ ಪೂರ್ವಜರು ತಮ್ಮ ಅಲೆಮಾರಿ ಜೀವನದ ನಂತರ ಕಂಡುಕೊಂಡ ಕೃಷಿಜೀವನದಲ್ಲಿ ಒಂದುಕಡೆ ನೆಲೆನಿಂತು ಸಂಬಂಧಗಳ ಹಿನ್ನೆಲೆಯಲ್ಲಿ ಬದುಕುವುದನ್ನು ರೂಢಿಸಿಕೊಂಡಿರುವುದು ತಿಳಿದಿರುವ ಸಂಗತಿ. ಈ ಸಂದರ್ಭದಲ್ಲಿ ಅವರು ಅನೇಕ ಕಾಡು ಪ್ರಾಣಿಗಳನ್ನು ಪಳಗಿಸಿ 'ಸಾಕು ಪ್ರಾಣಿ'ಗಳಾಗಿಸಿದ; ಬಹುಶಃ ಆತನೂ ಸಹ 'ಕಾಡು ಪ್ರಾಣಿ' ಆಗಿರುವುದರಿಂದ ಈ ಪ್ರಕ್ರಿಯೆ ಆತನಿಗೆ ಸಹಜ ಮತ್ತು ಸರಳವೂ ಆಗಿರಬೇಕು. ಇದರಿಂದಾಗಿ ಕಾಡಲ್ಲಿರುವ ಆಕಳು, ಕುರಿ, ನಾಯಿ, ಬೆಕ್ಕು, ಕೋಳಿ ಮುಂತಾದವುಗಳು ಕಾಲಾಂತರದಲ್ಲಿ ಸಾಕು ಪ್ರಾಣಿಗಳೆನಿಸಿಕೊಂಡವು. ಅವುಗಳ 'ಕುಲ–ಜಾತಿ'ಗಳಲ್ಲಿ ಒಂದಿಷ್ಟು ಪಲ್ಲಟಗಳು ನಡೆದು ಇಂದು ಮಾನವನ ಜೊತೆಯಲ್ಲಿ ಬದುಕುವ ಮತ್ತು ಆತನಿಗೆ ಆದಾಯ ಮೂಲಗಳಾಗಿಯೂ ಇವುಗಳು ಗಮನಾರ್ಹವಾಗಿವೆ.*

***ಮುಖ್ಯಪದಗಳು (Keywords)*** *ಗ್ರಾಮೀಣ ಸಂಸ್ಕೃತಿ, ಕಾಡು ಪ್ರಾಣಿ, ಪಕ್ಷಿ, ಕರಾವಳಿ.*

## ಪೀಠಿಕೆ

ಹಲವು ಸಂದರ್ಭಗಳಲ್ಲಿ ಪ್ರತಿಯೊಬ್ಬರ ಜಿಜ್ಞಾಸೆಗೆ ಕಾರಣವಾದ ಒಂದು ಮುಖ್ಯ ಪ್ರಶ್ನೆಯೆಂದರೆ, ಕೋಳಿ ಮೊದಲೋ? ಮೊಟ್ಟೆ(ತತ್ತಿ) ಮೊದಲೋ? ಎಂಬುದು. ಶತ ಶತಮಾನಗಳಿಂದ ನಡೆದ ಈ ಒಂದು ಚಿಂತನೆಗೆ ಮೊನ್ನೆ ಮೊನ್ನೆ ನಡೆದ ಗಂಭೀರವಾದ ಸಂಶೋಧನೆಯು ವೈಜ್ಞಾನಿಕ ಹಿನ್ನೆಲೆಯಲ್ಲಿ ಕೋಳಿಯೇ ಮೊದಲು ಎನ್ನುವ ನಿಗದಿತ ತೀರ್ಮಾನಕ್ಕೆ ಬಂದಿದೆ. ಇದು ಅಂತಿಮವಲ್ಲ. ಮುಂದಿನ ದಿನಗಳಲ್ಲಿ ಬರುವ ಉನ್ನತ ಮಟ್ಟದ ಅಧ್ಯಯನಗಳು ಇದಕ್ಕೂ ಭಿನ್ನವಾದ ವಿಷಯವನ್ನು ಮಂಡಿಸಬಹುದು. ಈ ಮೂಲಭೂತ ಪ್ರಶ್ನೆಯಂತೆ ಅಥವಾ ಇದರ ಮೂಲಕ ಜಗತ್ತಿನಲ್ಲಿ ಕೋಳಿ ಎನ್ನುವ ಒಂದು ಜೀವಿಯಿದೆ. ಅದು ಮಾನವನ 'ಸಾಕುಪಕ್ಷಿ'ಯಾಗಿದೆ. ಇದು ಪಕ್ಷಿ ಸಂಕುಲಕ್ಕೆ ಸೇರಿದರೂ 'ಹಾರುವುದನ್ನು ಮರೆತ ಪಕ್ಷಿ' ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಇಷ್ಟೆ ಆದರೆ ಕೋಳಿಯ ಕುರಿತಾದ ಕುತೂಹಲವನ್ನು ಇಲ್ಲಿಗೆ ಕೈ ಬಿಡಬಹುದಿತ್ತು. ಆದರೆ ಈ ಕೋಳಿ ಎನ್ನುವ ಜೀವಿ ಮಾನವನ ಬದುಕಿನೊಂದಿಗೆ ಹೊಂದಿದ ಅಂತಃ ಸಂಬಂಧ, ಮಾನವ ಮತ್ತು ಕೋಳಿಯ ಸಾಂಸ್ಕೃತಿಕ ಜಗತ್ತು. ಮಾನವ ಸಮಾಜೊ ನಿರ್ಮಿತ ಪುರುಷ

*Please cite this article as:* ಡಾ. ಗಜಾನನ ನಾಯ್ಕ. (2023). ಗ್ರಾಮೀಣ ಸಂಸ್ಕೃತಿಯಲ್ಲಿ ಬೆರೆತು ಹಾರುವುದ ಮರೆತಹಕ್ಕಿ (ಕರಾವಳಿಯ ಹಿನ್ನಲೆ). ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ4(4). ಪು.ಸಂ. 19–26.*

ಕೇಂದ್ರಿತ ದೃಷ್ಟಿಕೋನ, ಹಾಗೆಯೇ ಈತ ತನ್ನ ಸಾಂಸ್ಕೃತಿಕ ಜಗತ್ತಿನ ಮಾದರಿಯಲ್ಲಿಯೇ ಕೋಳಿಯ ಬದುಕನ್ನು ನಿರೂಪಿಸಿ ತನ್ನ ಹಿನ್ನೆಲೆಯಲ್ಲಿಯೇ ಕೋಳಿಯ 'ಅನನ್ಯತೆ'ಯನ್ನು ಸೃಷ್ಟಿಸಿದ್ದರ ಹಿನ್ನೆಲೆಯಲ್ಲಿ (ಕೋಳಿ) ಹಾರುವುದನ್ನು ಮರೆತ ಹಕ್ಕಿಯ ಕುರಿತಾದ ಚರ್ಚೆ ಮಾನವನ ಸಾಂಸ್ಕೃತಿಕ ಬದುಕನ್ನು ಸಾಮಾಜಿಕ ನೆಲೆಯಲ್ಲಿ ಅರ್ಥೈಸಿಕೊಳ್ಳುವ ಸಂದರ್ಭದಲ್ಲಿ ಮುಖ್ಯವಾಗುತ್ತದೆ.

'ಕೋಳಿ' ಎನ್ನುವ ಪದದ ಹುಟ್ಟನ್ನು ಹೀಗೆ ಗಮನಿಸಬಹುದು. ಈ ಪದದ ಮೊದಲ ಅಕ್ಷರ 'ಕೋ'ವು 'ಕ್', ಮತ್ತು 'ಓ' ಸೇರಿ ಆಗಿದೆ. ಅಂದರೆ ದೀರ್ಘ ಸ್ವರದಿಂದ ಪದದ ಆರಂಭವಾಗಿ ನಂತರ 'ಳ್', 'ಇ' ಎನ್ನುವ ಅಕ್ಷರ ಸೇರಿ ಆಗಿರುವ 'ಕೋಳಿ' ಎನ್ನುವ ಪದ ಬಹುತೇಕ ಸಂಸ್ಕೃತದಿಂದ ಬಂದಿರಬೇಕು. ಅಥವಾ ಕೋಳಿಯು 'ಕೊಕ್ಕೋ,,,, ಕೋ,,,, ಕೋ' ಎಂದು ಕೂಗುವುದರಿಂದ ಆ ಕೂಗೆ 'ಕೋಳಿ' ಎನ್ನುವ ಉಚ್ಚರಣೆಯನ್ನು ಪಡೆದಿರುವ ಸಾಧ್ಯತೆಯಿದೆ. ಆದರೆ ಕನ್ನಡ ರತ್ನಕೋಶದಲ್ಲಿ "ಕೋಳಿ– ಒಂದು ಜಾತಿಯ ಸಾಕುಪಕ್ಷಿ; ಕುಕ್ಕುಟ" ಎಂದಿದೆ. ಭಾಷಾ ವಿಜ್ಞಾನದ ಹಿನ್ನೆಲೆಯಲ್ಲಿ 'ಡೆರಿಡಾ' ಪ್ರಸ್ತಾಪಿಸುವ 'ಸೂಚಕ' ಮತ್ತು 'ಸೂಚಿತ' ಪರಿಕಲ್ಪನೆಯಲ್ಲಿ ಗಮನಿಸಿದರೆ, 'ಕೋಳಿ' ಮತ್ತು 'ಕೋಳಿಎನ್ನುವ ಪದ'ಕ್ಕೆ ಯಾವುದೇ ಸಂಬಂಧವಿಲ್ಲ; ಅದು ಆರೋಪಿತವಾದುದು. ಆದರೂ, ಬಹುತೇಕವಾಗಿ ಆ ಪಕ್ಷಿಯ ಕೂಗೇ ಅದರ ಹೆಸರಿಗೆ ಕಾರಣವಾಗಿರಬಹುದು.

ಕೋಳಿಯಲ್ಲಿ ಪ್ರಮುಖವಾಗಿ ನಾವು ಎರಡು ಪ್ರಬೇಧವನ್ನು ಕಾಣುತ್ತೇವೆ. ಒಂದು 'ಕಾಡುಕೋಳಿ'ಯಾದರೆ, ಇನ್ನೊಂದು 'ಊರು(ನಾಟಿ) ಕೋಳಿ'ಯಾಗಿದೆ (ಆಧುನಿಕ ಸಂದರ್ಭದಲ್ಲಿ ಶರವೇಗದಲ್ಲಿ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ವಿಜ್ಞಾನದ ಮುಂದುವರಿಕೆಯಿಂದ ಕೋಳಿ ಮಾಂಸದ ಕಾರಣಕ್ಕೆ ಕೋಳಿಗೆ ಪರ್ಯಾಯವಾಗಿ ಪೈಟರ ಕೋಳಿ, ಗಿರಿರಾಜ ಕೋಳಿ, ಫಾರಂ ಕೋಳಿ ಇತ್ಯಾದಿ 'ಕೋಳಿ ಕುಲ'ಗಳು ಬೆಳೆಯತ್ತಿರುವುದನ್ನು ನಾವಿಲ್ಲಿ ಗಮನಿಸಬಹುದು). ಕಾಡುಕೋಳಿಗಳ ವಾಸಸ್ಥಳ ಕಾಡು. ಕಾಡಿನಲ್ಲಿನ ಹುಳ–ಹುಪ್ಪಡಿ–ಇನ್ನಿತರ ಆಹಾರಗಳನ್ನು ತಿಂದು ಬದುಕುತ್ತವೆ. ಇದು ಕೆಲವರ ಆಹಾರವು ಆಗಿದೆ. ಕಾಡಿನಲ್ಲಿ ವಾಸಿಸುವ ಹಾಗೂ ಕಾಡಿನಲ್ಲಿ ಸಂಚರಿಸುವ ಅನೇಕರು 'ಉಳ್ಳ'(ಹಕ್ಕಿಗಳನ್ನು ಹಿಡಿಯುವ ಒಂದು ವಿಧಾನ)ವನ್ನು ಹಾಕಿ ಇವುಗಳನ್ನು ಹಿಡಿದು ತಿನ್ನುತ್ತಾರೆ. ಈ ಕಾಡುಕೋಳಿ ಮತ್ತು ಊರುಕೋಳಿಗಳ ಬಣ್ಣ, ಆಕಾರ, ರೂಪ, ಸ್ವರೂಪ ಮತ್ತು ಬದುಕುವ ವಿಧಾನಗಳಲ್ಲಿ ಯಾವುದೆ ತರಹದ ಭಿನ್ನತೆ ಕಾಣುವುದಿಲ್ಲ. ಇವುಗಳನ್ನು ಗಮನಿಸಿದಾಗ ತಿಳಿದು ಬರುವ ಸಂಗತಿಯೆಂದರೆ, ಬಹುತೇಕವಾಗಿ ಆರಂಭದಲ್ಲಿ 'ಕಾಡುಕೋಳಿ' ಎನ್ನುವ ಒಂದು ಜಾತಿಯ ಪಕ್ಷಿ ಮಾತ್ರ ಇದ್ದು, ನಾಗರಿಕತೆ ಬೆಳೆದಂತೆ ಮಾನವ ಕಾಡಿಂದ ನಾಡಿನೆಡೆಗೆ ಪಯಣಿಸುವಾಗ ತನ್ನೊಂದಿಗೆ 'ಕಾಡಸಂಸ್ಕೃತಿ'ಯ ಹಲವಾರು ಚಹರೆಗಳೊಂದಿಗೆ ಕಾಡುಕೋಳಿಯನ್ನು ತನ್ನ ಅನುಕೂಲಕ್ಕೆ ಸಾಕಲು ತಂದಿರಬೇಕು. ಕಾಲಾಂತರದಲ್ಲಿ ಕಾಡಿಂದ ನಾಡಿಗೆ ಬಂದ ಈ ಕೋಳಿಗಳು ನಾಡ ಪರಸರದಿಂದ 'ಊರಕೋಳಿ/ನಾಟಿಕೋಳಿ'ಯಾಗಿ 'ರೂಪಾಂತರ'ಗೊಂಡಿರಬಹುದು.

ಹಿಂದಿನಂತೆ ಈಗಲು ಕಾಡುಕೋಳಿಗಳು ಮರದ ಪೊಟರೆ, ಸಾಮಾನ್ಯ ಬಿಲಗಳು ಹಾಗೂ ಮರದ ಟೊಂಗೆಗಳಲ್ಲಿ ರಾತ್ರಿ ಕಳೆದು ಬೆಳಕು ಹರಿದಾಗ ಆಹಾರವನ್ನು ಹುಡುಕುತ್ತಾ ದಿನದ ಜೀವನವನ್ನು ಪ್ರಾರಂಭಿಸುತ್ತದೆ. ಆದರೆ ಹಳ್ಳಿಗರು ಊರು ಕೋಳಿಗಳನ್ನು ಸಾಕಲು ಅವುಗಳಿಗೆ ಪ್ರತ್ಯೇಕ ಮನೆಗಳನ್ನು ನಿರ್ಮಿಸಿರುತ್ತಾರೆ. ಆ ಮನೆಗಳನ್ನು 'ಕೋಳಿಗೂಡು' ಎಂದು ಕರೆಯುತ್ತಾರೆ. ಪ್ರತಿ ಮನೆಯ ಕೋಳಿಯು

ತಮ್ಮ ಗೂಡಿಗೆ ಹೊಂದಿಕೊಂಡಿರುತ್ತದೆ. ರಾತ್ರಿಯಾಗುತ್ತಿದ್ದಂತೆ ಬಹುತೇಕ ಕೋಳಿಗಳು ಗೂಡನ್ನು ಸೇರುತ್ತವೆ. ಕೆಲವು ಉಡಾಳ ಕೋಳಿಗಳು ಮಾತ್ರ ಗೂಡಿಗೆ ಹೋಗದೆ ಹತ್ತಿರದ ಮರಗಳನ್ನೇರಿ ರಾತ್ರಿ ಕಳೆದು ಸೂರ್ಯೋದಯ ಆಗುತ್ತಿದ್ದಂತೆ ಬೇಗನೆ ತನ್ನ ಕಾಯಕವನ್ನು ಆರಂಭಿಸಿ ಬಿಡುತ್ತದೆ. ಈ ಎಲ್ಲಾ ಸಂಗತಿಗಳನ್ನು ಗಮನಿಸಿದಾಗ 'ಕಾಡುಕೋಳಿ'ಗಳ ಪರಿಷ್ಕೃತ ರೂಪವೆ 'ಊರಕೋಳಿ' ಎನ್ನಬಹುದು.

ಹೀಗೆ ಹಳ್ಳಿಗಳಲ್ಲಿ ಕೋಳಿವಾಸಿಸುವ ಮನೆಯಾದ **'ಕೋಳಿಗೂಡಿ'**ನ ಕುರಿತು ಒಂದು ಗಾದೆಯೇ ಇದೆ, ಅದೇನೆಂದರೆ, **"ಕೋಳಿ ಗೂಡಲಿದ್ದು ದೇವಲೋಕದ ಸ್ವಪ್ನ ಕಾಣಬೇಡ"**. ಇದರ ಒಟ್ಟಾರೆ ಅರ್ಥ ಆಸೆಗೆ ಇತಿಮಿತಿಗಳಿರಲಿ ಎಂಬುದಾಗಿದೆ. ಮಾನವ ಸಮಾಜದಂತೆ ಕೋಳಿಗಳಲ್ಲಿಯೂ ಲಿಂಗ ತಾರತಮ್ಯವನ್ನು ನಾವು ಪ್ರತಿ ಹಂತದಲ್ಲಿಯೂ ಕಾಣಬಹುದಾಗಿದೆ. ಕೋಳಿಯ ಬದುಕನ್ನು ಮಾನವನೇ ನಿರ್ಧರಿಸುತ್ತಿದ್ದುದರಿಂದ ಮಾನವ ಸಮಾಜದಂತೆ ಕೋಳಿಗಳಲ್ಲಿಯೂ ಸ್ತ್ರೀ ಎಲ್ಲಾ ವಿಧದಲ್ಲಿಯೂ ಪುರುಷನಿಗಿಂತ ಕೆಳಸ್ತರದಲ್ಲಿಯೇ ತನ್ನನ್ನು ಮೀಸಲಿಟ್ಟಿದ್ದಾಳೆ.

ಇವುಗಳಲ್ಲಿ ಲಿಂಗಾಧಾರಿತವಾಗಿ ಗಂಡನ್ನು **'ಕೋಳಿಹುಂಜ'**(COCK) ಎಂತಲು, ಹೆಣ್ಣನ್ನು **'ಕೋಳಿಹೆಂಟೆ'**(HEN)ಎಂತಲು ಕರೆಯತ್ತಾರೆ. (ನಗರವಾಸಿಗಳು ಮತ್ತು ಕೋಳಿಯಕುರಿತು ತಿಳಿಯದೆ ಇರುವವರು **'ಕೋಳಿಹುಂಜ','ಕೋಳಿಹೆಂಟ'** ಎನ್ನುವ ಬದಲು 'ಗಂಡುಕೋಳಿ' ಮತ್ತು 'ಹೆಣ್ಣುಕೋಳಿ' ಎಂದು ಕರೆಯವುದು ರೂಢಿಯಲ್ಲಿದೆ.) ಕೋಳಿ ಹುಂಜವು ದೈಹಿಕವಾಗಿ ಕೋಳಿ ಹೆಂಟೆಗಿಂತ ಪ್ರಬಲವಾಗಿರುವುದಲ್ಲದೆ, ತಲೆಯ ಮೇಲೆ ಪುರುಷ ಸಂಕೇತದ ದೊಡ್ಡದಾದ ಜುಟ್ಟನ್ನು ಹೊಂದಿರುತ್ತದೆ. ಅಲ್ಲದೆ ವಿಭಿನ್ನ ಬಣ್ಣಗಳಿಂದ ಕೂಡಿದ್ದು ಕಾಣಲು ಕೋಳಿಹೆಂಟೆಗಿಂತ ಸುಂದರವಾಗಿರುತ್ತದೆ. ಕೋಳಿಹೆಂಟೆಯು ತನಗಿರುವ ಪ್ರಕೃತಿದತ್ತವಾದ ಗುಣದಿಂದ ಕಾಲಕಾಲಕ್ಕೆ ಮೊಟ್ಟೆಯನ್ನಿಟ್ಟು ಅದಕ್ಕೆ ಕಾವುಕೊಟ್ಟು ಮರಿಮಾಡುವ ವಿಶೇಷ ಸಾಮರ್ಥ್ಯ ಹೊಂದಿರುತ್ತದೆ.

ಮಾನವ ತನ್ನ ಜೀವನದ ಸೈದ್ಧಾಂತಿಕ ಹಿನ್ನೆಲೆಯಲ್ಲಿ ತಾನು ಸಾಕುತ್ತಿರುವ ಕೋಳಿಗಳ ಬದುಕನ್ನು ನಿರೂಪಿಸಿದ್ದಾನೆ ಎಂಬುದಕ್ಕೆ ಕೋಳಿಗಳಲ್ಲಿರುವ ವಿವಿಧ ಹೆಸರುಗಳನ್ನು ಗಮನಿಸಬಹುದು. ಕೋಳಿಗಳಲ್ಲಿ ಮರಿಯೊಂದು ಯವ್ವನಕ್ಕೆ ಬಂದು ಕೋಳಿ ಹೆಂಟಿಯಾಗುತ್ತಿರುವ ಸಂದರ್ಭದಲ್ಲಿ ಅಂತಹ ಕೋಳಿಹೆಂಟೆಯನ್ನು **'ಕನ್ಯೆಹೆಂಟೆ'** ಎಂದು ಕರೆಯುತ್ತಾರೆ. **'ಕನ್ಯೆ'** ಎಂಬುದು ಮಾನವ ಸಮಾಜದಲ್ಲಿಯೂ ಬಳಕೆಯಿರುವ ಒಂದು ಪದ. ಯುವತಿಯಾಗಿದ್ದು ಗಂಡು ಜೀವಿಯಿಂದ ಯಾವುದೇ ತರಹದ ದೈಹಿಕ ಅಥವಾ ಮಾನಸಿಕ ಸಂಬಂಧವನ್ನು ಹೊಂದಿರದಿರುವವಳನ್ನು ವಿವಾಹ ಪೂರ್ವ ಸ್ಥಿತಿಯನ್ನು **'ಕನ್ಯೆ'**ಯನ್ನುತ್ತಾರೆ. ಹಾಗೆ ಕೋಳಿಹುಂಜದ ಸಂಗವನ್ನು ಹೊಂದಿರದ ಹೆಂಟೆಯನ್ನು **'ಕನ್ನಹೆಂಟೆ'** ಎನ್ನುತ್ತಾರೆ. ಮುಂದುವರಿದು ತನ್ನ ಜೀವನದಲ್ಲಿ ಮೊದಲ ಬಾರಿಗೆ ಮೊಟ್ಟೆಯಿಡಲು ಪ್ರಾರಂಭಿಸದ ಕೋಳಿಹೆಂಟೆಯನ್ನು **'ತೊಡಹೆಂಟೆ'**ಯನ್ನುತ್ತಾರೆ.

ನಮ್ಮಲ್ಲಿ ಬಳಕೆಯಲ್ಲಿರುವ **'ತೊಡಬಸುರಿ'** ಹಾಗೂ ಆಕಳುಗಳಲ್ಲಿರುವ **'ತೊಡಮಣಕ'**ಗಳಂತಹ ಹೆಸರುಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಹೆಂಟೆ ಮೊಟ್ಟೆಯಿಟ್ಟು ಅದನ್ನು ಮರಿ ಮಾಡಲು ಸಿದ್ಧವಾದಾಗ ಹೆಂಟೆಗೆ **'ಕಾವು'** ಬಂದಿದೆ ಎಂದು, ಒಂದು ಒಳ್ಳೆಯ ದಿನವನ್ನು ನೋಡಿ ಕೋಳಿಹೆಂಟೆಗೆ ಬುಟ್ಟಿಯನ್ನು ಕಟ್ಟುತ್ತಾರೆ. ಆಗ ಕೋಳಿಗೆ ಮರಿಮಾಡಲು ಅದರ ಎಲ್ಲಾ ಮೊಟ್ಟೆಗಳನ್ನು ಕೊಡದೆ

'ಬೆಸಸಂಖ್ಯೆ'ಯ ಮೊಟ್ಟೆಗಳನ್ನಿಡುವುದು ವಿಶೇಷ. ಬಹುತೇಕ ಮಳೆಗಾಲದ ಸಂದರ್ಭದಲ್ಲಿ ಕೋಳಿಗೆ ಮರಿ ಮಾಡಲು ಈ ರೀತಿ ಬುಟ್ಟಿಯನ್ನು ಕಟ್ಟುವುದು ತುಂಬಾ ಕಡಿಮೆ. ಒಂದು ವೇಳೆ ಕಟ್ಟಿದರೂ ಆ ಬುಟ್ಟಿಯಲ್ಲಿ ಕಬ್ಬಿಣದ ಯಾವುದಾದರು ವಸ್ತುವನ್ನಿಡುತ್ತಾರೆ. ಈ ರೂಢಿ ಯಾಕೆ ಬಂದಿದೆಯೆಂದರೆ, ಮಳೆಗಾಲದಲ್ಲಿನ ಭಯಂಕರ ಗುಡುಗು–ಸಿಡಿಲುಗಳು ಮೊಟ್ಟೆಯು ಮರಿಯಾಗುವ ಪ್ರಾಕೃತಿಕ ಕ್ರಿಯೆಯ ಮೇಲೆ ಯಾವುದೇ ದುಷ್ಪರಿಣಾಮ ಬೀರದಿರಲಿ ಎಂಬುದಾಗಿದೆ.

ಕೋಳಿಹೆಂಟೆಯು ಬಹುತೇಕವಾಗಿ 18 ರಿಂದ 21 ದಿನಗಳ ಕಾಲ ಮೊಟ್ಟೆಗಳಿಗೆ ನಿರಂತರ ಕಾವನ್ನು ಕೊಟ್ಟು ಮರಿಮಾಡುತ್ತದೆ. ಆ ನಂತರದಲ್ಲಿ ಈ ರೀತಿ ಮರಿಯನ್ನು ಹೊಂದಿದ ಹೆಂಟೆಗಳನ್ನು 'ಮರಿಹೆಂಟೆ' ಎಂದು ಕರೆಯತ್ತಾರೆ. ಇಂತಹ ಸಂದರ್ಭದಲ್ಲಿ ಈ ಮರಿಹೆಂಟೆಯು ತನ್ನ ಮರಿಗಳನ್ನು ಜೋಪಾನ ಮಾಡಲು ಹರಸಾಹಸ ಪಡುತ್ತದೆ. ಹಾವು, ಕಪ್ಪೆ, ಗಿಡುಗ ಮತ್ತು ಕಾಗೆಗಳಿಂದ ಮರಿಗಳನ್ನು ಕಾಪಾಡಲು ಸದಾಸಿದ್ಧವಾಗಿರುತ್ತದೆ. ಯಾರಾದರು ಮರಿಯನ್ನು ಮುಟ್ಟಲು ಬಂದರೆ ಹಿಂದೆ ಮುಂದೆ ನೋಡದೆ ಅವರ ಮೇಲೆ ಎರಗುತ್ತದೆ. ಅಷ್ಟೆ ಅಲ್ಲಾ ಆಹಾರವನ್ನು ಚಿಕ್ಕ–ಚಿಕ್ಕ ಚೂರುಗಳನ್ನಾಗಿಸಿ ಮರಿಗಳಿಗೆ ನೀಡಿ, ನೀರನ್ನು ಕುಡಿಸಿ ಬೆಳೆಸಲು ನಿರಂತರ ಶ್ರಮಿಸುತ್ತದೆ. ಇದು ಮಾನವನು ತನ್ನ ಮುಗುವನ್ನು ಬೆಳೆಸುವ ಕರ್ತವ್ಯದಷ್ಟೆ ಜವಾಬ್ದಾರಿಯುತವಾಗಿರುತ್ತದೆ.

ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಕೋಳಿಗಳನ್ನು ಸಾಕುವುದು ಪರಂಪರೆಯಾಗಿ ಅಥವಾ ಉಪಕಸುಬಾಗಿ ನಡೆಯತ್ತಿದೆ (ಸಮಕಾಲೀನ ಸಂದರ್ಭದ 'ಕೋಳಿಪಾರಂ ಕಲ್ಚರ್' ಜಾಗತೀಕರಣದ ಕೊಡುಗೆ). ಕೋಳಿಯೊಂದಿಗೆ ಅದರ ಗೊಬ್ಬರದ ಕಾರಣಕ್ಕೂ ಕೋಳಿಯನ್ನು ಸಾಕುತ್ತಾರೆ. ಕೆಲವೊಂದು ತರಕಾರಿ ಮತ್ತು ಬೆಳೆಗಳಿಗೆ ಈ ಗೊಬ್ಬರದ ಅನಿವಾರ್ಯತೆಯಿದೆ. ಈ ಕಾರಣ ಸಹ ಕೋಳಿಸಾಕುವ ಉದ್ದೇಶದ ಹಿಂದಿರುವ ಪ್ರೇರಣೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಈ ಗೊಬ್ಬರಕ್ಕೆ ರೈತರು 'ಕೋಳಿಪಾರಂ'ಗಳನ್ನು ಅವಲಂಬಿಸಿರುವುದನ್ನು ನಾವು ಕಾಣಬಹುದಾಗಿದೆ. ಈ ಗೊಬ್ಬರ ಸಾವಯವ ಗೊಬ್ಬರದಂತಿರುವುದರಿಂದ ಮಣ್ಣಿನ ಫಲವತ್ತತೆಯನ್ನು ದ್ವಿಗುಣಗೊಳಿಸುತ್ತದೆ. ಇದಕ್ಕಾಗಿ ಕೋಳಿಯ ಗೊಬ್ಬರಕ್ಕೆ ತುಂಬಾ ಬೇಡಿಕೆಯಿದೆ.

ಮಲೆನಾಡು ಮತ್ತು ಕರಾವಳಿಗಳ ಹಳ್ಳಿಗಳಲ್ಲಿ ಕೋಳಿಹುಂಜ(ಗಂಡುಕೋಳಿ)ವನ್ನು 'ಗುಟ್ಟಕ್ಕೆ ಹಾಕುವ' ಮತ್ತು ಹುಂಜ–ಹೆಂಟೆಗಳನ್ನು 'ಗಡಿಪೂಜೆ'ಯ ಸಂದರ್ಭದಲ್ಲಿ ಬಲಿಕೊಡುವ ಪದ್ಧತಿಯನ್ನು ನಾವು ಕಾಣುತ್ತೇವೆ. ಈ ಪ್ರದೇಶಗಳ ಶೇಕಡಾ 10ರಷ್ಟು ಹಳ್ಳಿಗಳಲ್ಲಿ 'ಗುಟ್ಟದ ಹುಂಜಗಳು' ಇರುತ್ತವೆ. ಇದರಲ್ಲಿ ಕೆಲವು ಕುಟುಂಬದವರು ಮಾತ್ರ ತಮ್ಮ ಹುಂಜವನ್ನು 'ಕೋಳಿಪಡೆ/ಕೋಳಿ ಅಂಕ'ಕ್ಕೆ ತೆಗೆದುಕೊಂಡು ಹೋಗುತ್ತಾರೆ. ಕೆಲವು ಕುಟುಂಬಗಳಲ್ಲಿ ಕಾರಣಾಂತರದಿಂದ ಈ ರೀತಿ ಕೋಳಿಯನ್ನು ಗುಟ್ಟಕ್ಕೆ ಹಾಕುವುದನ್ನು ಕೈ ಬಿಟ್ಟಿರುತ್ತಾರೆ. ಆದರೆ ಅವರ ಮನೆಗಳಲ್ಲಿ ಕಾರಣಾಂತರದಿಂದ ಏನಾದರೂ ತೊಂದರೆಗಳು ಬಂದಾಗ, ಬಹುತೇಕ ಮನೆಯಲ್ಲಿ ಕೋಳಿಹುಂಜವನ್ನು ಗುಟ್ಟಕ್ಕೆ ಹಾಕದೆ ಇರುವುದರಿಂದ ಈ ರೀತಿಯಾಗುತ್ತಿರಬೇಕೆಂದು ಭಾವಿಸಿ ಮತ್ತೆ ಹಿಂದಿನ ಪದ್ಧತಿಯನ್ನು ಪುನ: ಪ್ರಾರಂಭಿಸುವುದುಂಟು. ಕೆಲವು ವರ್ಷಗಳ ಹಿಂದೆ ನಾವೆಲ್ಲಾ ಚಿಕ್ಕವರಿರುವಾಗ (80–90ರ ದಶಕದಲ್ಲಿ) ಚಿಕ್ಕ ಮಕ್ಕಳಿಗೆ ಅಥವಾ ಹಿರಿಯರಿಗೆ ಕಾರಣಾಂತರದಿಂದ ಅನಾರೋಗ್ಯವಾಗಿ ಔಷಧಿಯನ್ನು ಸೇವಿಸಿದರೂ ಸರಿಯಾಗಿ ಚೇತರಿಸಿಕೊಳ್ಳದಿದ್ದರೆ

ಹಳ್ಳಿಗಳಲ್ಲಿ ಈ ಕೋಳಿಯನ್ನು ಹತ್ತಿರದ ಭೂತ, ದೆವ್ವಗಳಿಗೆ ಹಾರಿಸಿಬಿಡುತ್ತಿದ್ದರು. ಈ ವೇಳೆಯಲ್ಲಿ ಚಿಕ್ಕವರಿಗೆ ಕೋಳಿಮರಿಗಳನ್ನು ಮತ್ತು ಹಿರಿಯರಿಗೆ ಬಲಿತ ಕೋಳಿಗಳನ್ನು ಮಾತ್ರ ಹಾರಿಬಿಡುತ್ತಿದ್ದರು. ಇಷ್ಟೆ ಅಲ್ಲ ಸ್ತ್ರೀಯರಿಗೆ ಕೋಳಿಹೆಂಟೆಯನ್ನು ಪುರುಷರಿಗೆ ಕೋಳಿಹುಂಜವನ್ನು ಮಾತ್ರ ಹಾರಿಬಿಡುತ್ತಿದ್ದರು. ಈ ನಡಾವಳಿಯು ಮಾನವ ಸಮಾಜದ ರೂಢಿ ಸಂಪ್ರದಾಯಗಳನ್ನು ಕೋಳಿಗಳಿಗೂ ಅನ್ವಯಿಸಿರುವುದನ್ನು ಸಾದರಪಡಿಸುತ್ತದೆ. ಇದಲ್ಲದೆ ಕೆಲವು ಊರುಗಳಲ್ಲಿ ಪ್ರತಿ ವರ್ಷ ಹತ್ತಿರದ ದೇವಾಲಯಗಳ ಪಲ್ಲಕ್ಕಿಯನ್ನು ತಂದು ಒಂದೆರಡು ದಿನಗಳ ಕಾಲ ಪೂಜೆ ಸಲ್ಲಿಸಿ, ಆ ಪಲ್ಲಕ್ಕಿ ಪುನ: ಹೊರಟಾಗ 'ಅವಾರಿ' ತಿದ್ದುವ ಕ್ರಮವಿತ್ತು. ಇಂತಹ ಸಂದರ್ಭದಲ್ಲಿ ಊರಿನ 'ನೆಡೆ'(ಊರ ಕೊನೆಗೆ ಇರುವ ದೈವಿಕ ಸ್ಥಳಗಳು)ಗಳಿಗೆ ಹಾಗೂ ಕೆಲವು ಸ್ಥಳಗಳಲ್ಲಿ ಕೋಳಿಗಳನ್ನು ಹಾರಿಸಿ ಬಿಡುವ ಪದ್ಧತಿಯಿತ್ತು. ಆವಾಗ ಹೆಣ್ಣು–ಗಂಡು ಎಂಬ ಯಾವುದೇ ಭೇದ ಮಾಡದೆ ಯಾವುದಾದರೂ ಒಂದನ್ನು ಹಾರಿ ಬಿಡುತ್ತಿದ್ದರು. ಇತ್ತೀಚೆಗೆ ಈ ಬಗೆಯ ಹಲವು ಸಾಮಾಜೊ ನಿರ್ಮಿತ ಪದ್ಧತಿಗಳು ಹಳ್ಳಿಗಳ ಸಾಂಸ್ಕೃತಿಕ ಕಣಜದಿಂದ ದೂರಾಗುತ್ತಿವೆ.

ಇನ್ನು ಕೋಳಿಯನ್ನು ಗುಟ್ಟಕ್ಕೆ ಹಾಕುವ ಸಂಗತಿಯ ಕುರಿತು ಆಲೋಚಿಸುವುದಾದರೆ, ಕೋಳಿಯನ್ನು ಗುಟ್ಟಕ್ಕೆ ಹಾಕುವುದರ ಹಿಂದೆ ಎರಡು ಪ್ರಬಲ ಪೂರಕ ಉದ್ದೇಶಗಳಿವೆ. ಮೊದಲನೆಯದು ತಲ ತಲಮಾರುಗಳಿಂದ ಕುಟುಂಬದಲ್ಲಿ ಈ ಪದ್ಧತಿಯನ್ನು ನಡೆಸಿಕೊಂಡು ಬಂದಿರುವುದರಿಂದ ಅದನ್ನು ಮುಂದುವರಿಸುವುದು. ಎರಡನೆಯದು ಮೊದಲಿನದರ ಮುಂದುವರಿಕೆಯಂತಿದೆ. ಅದೆಂದರೆ, ಕೋಳಿಯನ್ನು ಗುಟ್ಟಕ್ಕೆ ಹಾಕಿರುವುದರಿಂದ ಅದನ್ನು ಕೋಳಿಪಡೆಗೆ ತೆಗೆದುಕೊಂಡು ಹೋಗುವುದಾಗಿದೆ. ಈ ಕೋಳಿಪಡೆ ಒಂದು ರೀತಿಯಿಂದ ಏಕ ವ್ಯಕ್ತಿ ಯುದ್ಧದ ಸ್ವರೂಪದಲ್ಲಿರುವುದರಿಂದ ಇಲ್ಲಿ 'ಗಂಡಾ'ದ ಕೋಳಿಹುಂಜವನ್ನು ಮಾತ್ರ ಬಳಸಿಕೊಳ್ಳಲಾಗುತ್ತದೆಯೇ ವಿನಹ ಕೋಳಿಹೆಂಟೆಯನ್ನು ಬಳಸಿಕೊಳ್ಳುವುದಿಲ್ಲ. ಇದಕ್ಕೂ ಕೋಳಿಗಳ ಮಾರಾಟದ ವಿಧಾನಕ್ಕೂ ನೇರ ಸಂಬಂಧವಿದೆ. ಯಾಕೆಂದರೆ, ಕೋಳಿಗಳನ್ನು ಮಾರಾಟ ಮಡುವಾಗ ಸಹ ಹುಂಜಕ್ಕೆ ಹಚ್ಚಿನ ಬೆಲೆಯಿದ್ದರೆ, ಹೆಂಟೆಗೆ ಬೆಲೆ ತುಂಬಾ ಕಡಿಮೆಯಿರುತ್ತದೆ. ಇದಕ್ಕೆ ಕಾರಣವೇನೆಂದರೆ ಹುಂಜಗಳು ತೂಕದಲ್ಲಿ ಹೆಂಟಿಗಿಂತ ಸುಮಾರುಮೂರು ಪಟ್ಟು ಜಾಸ್ತಿಯಿರುವುದು ಹಾಗೂ ಹೆಂಟಿಯನ್ನು ಬಿಟ್ಟು ಹುಂಜವನ್ನು ಮಾತ್ರ ಕೋಳಿಪಡೆಗಳಲ್ಲಿ ಬಳಸಿಕೊಳ್ಳುವುದಾಗಿದೆ.

ಈ ಕೋಳಿಅಂಕವು 70–80ರ ದಶಕದವರೆಗೆ ಜಾನಪದ ಸೊಗಡಿನೊಂದಿಗೆ ಪಾರಂಪರಿಕ ಆಟದ ಸ್ವರೂಪದಲ್ಲಿತ್ತು.ಆ ನಂತರದಲ್ಲಿ ಸರಕಾರ ವಿವಿಧ ಕಾನೂನುಗಳನ್ನು ಜಾರಿಗೆ ತಂದುದರಿಂದ ಕೋಳಿಪಡೆಗಳ ಸ್ವರೂಪವು ಬದಲಾಗಿದೆ. ಈ ಕೋಳಿಪಡೆಯಲ್ಲಿ ಮಾಂಸಾಹಾರಿಗಳಾದ ಕೆಳವರ್ಗ ಮತ್ತು ಕೆಳಮಧ್ಯಮ ವರ್ಗದವರು ಹೆಚ್ಚಾಗಿ ಭಾಗವಹಿಸುತ್ತಾರೆ. ಯಾಕೆಂದರೆ, ಮೇಲ್ವರ್ಗದವರು ಕೋಳಿಯನ್ನು ಸಾಕುವ ಮತ್ತು 'ಗುಟ್ಟದ ಹುಂಜದ ಸಂಸ್ಕೃತಿ'ಯಿಂದ ತುಂಬಾ ದೂರ ಬಂದಿರುವುದರಿಂದ ಅವರು ಭಾಗವಹಿಸುವುದಿಲ್ಲ. ಹೀಗಿದ್ದರೂ ಕೆಲವರು 'ಅಂಕ'ದ ಮೇಲಿನ ಕುತೂಹಲದಿಂದ ಭಾಗವಹಿಸುವುದುಂಟು. ಕೋಳಿ ಅಂಕಗಳು ನಡೆಯುವ ಕೆಲವೊಂದು ನಿರ್ದಿಷ್ಟ ಊರುಗಳಿದ್ದು ಅಲ್ಲಿನ ಮುಖಂಡರು ಆ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಹತ್ತಿರದ ಪೋಲಿಸ್ ಸ್ಟೇಷನ್‌ದಿಂದ ಕಾನೂನಾತ್ಮಕ ಒಪ್ಪಿಗೆಯನ್ನು ಪಡೆದಿರುತ್ತಾರೆ. ಇಲ್ಲಿ ಕೋಳಿಯನ್ನು ಬಿಡಲು ವಿಶೇಷ ಪರಿಣಿತರಿರುತ್ತಾರೆ. ಅವರಿಗೆ ಒಂದಿಷ್ಟು ಹಣವನ್ನು ತೋಂಡಿಯಾಗಿ ಕೊಡಲು ತೀರ್ಮಾನಿಸಿರುತ್ತಾರೆ. ವಿಶೇಷವೆಂದರೆ ಅವರ ಅಂಕಿತ ನಾಮದೊಂದಿಗೆ ಈ ಕೋಳಿ ಬಿಡುವ

ಕಾಯಕವು ಅನ್ವರ್ಥಕವಾಗಿ ಸೇರಿಕೊಂಡು 'ಕೋಳಿಬಿಡು ಗಣ್ಣ', 'ಕೋಳಿಬಿಡು ನಾಗಪ್ಪ' ಇತ್ಯಾದಿ ಹೆಸರುಗಳನ್ನು ಪಡೆದಿರುತ್ತಾರೆ. ಇದು ಅವರ ಅನನ್ಯತೆಯಾಗಿ ಅಸ್ಮಿತೆಯ ಸಂಗತಿಯಾಗಿ ಉಳಿದುಕೊಂಡಿದ್ದು ಅವರ ಕುಟುಂಬವನ್ನು ಈಗಲೂ ಇದೇ ಹೆಸರಿನಿಂದಲೇ ಗುರುತಿಸಲಾಗುತ್ತಿದೆ.

ಈ ಕೋಳಿಪಡೆಗಳಿಗೆ ಬಳಸಿಕೊಳ್ಳುವ ಹುಂಜಗಳನ್ನು ಅವುಗಳ ಬಣ್ಣಗಳಿಂದ 'ಕಜ್ಲಹುಂಜ', 'ಕೆಂಪಹುಂಜ' ಮತ್ತು 'ಬಿಳಿಹುಂಜ' ಎಂಬಿತ್ಯಾದಿ ಹೆಸರುಗಳಿಂದ ಕರೆಯತ್ತಾರೆ. ಮೇಲ್ನೋಟಕ್ಕೆ ಈ ಅಂಕವು ಕೇವಲ ಕೋಳಿಗಳ ಹೋರಾಟದಂತೆ ಕಂಡರೂ ಇಲ್ಲಿ ಮನುಷ್ಯ–ಮನುಷ್ಯರ ನಡುವೆ ಹೋರಾಟಗಳು ನಡೆಯುತ್ತವೆ. ಅಂಕ ನಡೆಯುವಾಗ ಕೋಳಿಯ ವಾರಸುದಾರ ಮತ್ತು ಅಲ್ಲಿ ನೆರೆದ ಹಲವರು ಕೋಳಿಗಳ ಮೇಲೆ 'ವಡ್ಡ'(ಜಿದ್ದು)ವನ್ನು ಹಣದ ರೂಪದಲ್ಲಿ ಕಟ್ಟುತ್ತಾರೆ. ವಡ್ಡ ಕಟ್ಟಿದ ಕೋಳಿಯೆನಾದರೂ ತನ್ನ ಪ್ರತಿಸ್ಪರ್ಧಿ ಕೋಳಿಯನ್ನು ಓಡಿಸಿದರೆ ಅಥವಾ ತನ್ನ ಕಾಲಿಗೆ ಕಟ್ಟಿದ ಹರಿತವಾದ ಚಾಕುವಿನಿಂದ ಇನ್ನೊಂದು ಕೋಳಿಯನ್ನು ಇರಿದು ಕೊಂದರೆ, ಅವನು ಜಿದ್ದಿನಲ್ಲಿ ಗೆದ್ದು ಹಣವನ್ನು ಗೆಲ್ಲುತ್ತಾನೆ. ಇದಕ್ಕೆ ಬದಲಾಗಿ ವಿರುದ್ಧ ಫಲಿತಾಂಷ ಬಂದರೆ ಆತ ತನ್ನ ಹಣವನ್ನು ಕಳೆದು ಕೊಳ್ಳುತ್ತಾನೆ. ಕೋಳಿಗಳ ಈ ಅಂಕದಲ್ಲಿ ಒಂದು ಕೋಳಿ ಗೆದ್ದು ಇನ್ನೊಂದು ಸೋತರೆ, ಗೆದ್ದ ಕೋಳಿಯ ಮಾಲೀಕನಿಗೆ ಸೋತ ಕೋಳಿ ಸಿಗುವುದರೊಂದಿಗೆ ಅದರ ಮೇಲೆ ಕಟ್ಟಿದ ವಡ್ಡದ ಹಣ ಸಹ ಸಿಗುತ್ತದೆ.

ಈ ಎಲ್ಲಾ ಕಾರಣಗಳಿಂದ ಕೋಳಿ ಅಂಕ ರೋಚಕವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಮಾತು ಮತ್ತು ಹಣದ ವಿಚಾರದಲ್ಲಿ ಮಾತು ಬೆಳೆದು ಗಲಾಟೆಯಾಗಿ ಕೈ–ಕೈ ಸೇರಿ ಹೊಡೆದಾಟಗಳೂ ನಡೆಯುವುದುಂಟು. ಈ ಕಾರಣಕ್ಕೆ ಸರಕಾರ ಕೋಳಿಅಂಕವನ್ನು ಕಾನೂನು ಮತ್ತು ಪೋಲೀಸರ ಮೂಲಕ ಒಂದು ಹಂತದಲ್ಲಿ ನಿಷೇಧಿಸಿದೆ. ಆದರೂ ಕೆಲವು ಊರುಗಳ ಮುಖಂಡರು ಪೋಲಿಸ್‌ರ ಅಧಿಕೃತ ಒಪ್ಪಿಗೆಯಲ್ಲಿ ಕೋಳಿ ಅಂಕವನ್ನು ವಿಶೇಷ ಸಂದರ್ಭಗಳಲ್ಲಿ ನಡೆಸುತ್ತಾರೆ. ಈ ಕೆಲಸಗಳು ಗ್ರಾಮೀಣ ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ತಲುಪಿಸುವ ಪ್ರಯತ್ನವೂ ಆಗಿದೆ ಎನ್ನಬಹುದು.

ಮುಂಗಾರು ಪ್ರಾರಂಭವಾಗಿ ನೀಲಿ ಬಣ್ಣದ ಹೊಳೆಗಳು ಕೆಂಪು(ಕಳಕನೀರು) ಬಣ್ಣದ ನೀರಿನಿಂದ ತುಂಬಿ ಹರಿಯುತ್ತಿದ್ದಂತೆ ಮಲೆನಾಡು, ಕರಾವಳಿಗಳಲ್ಲಿ 'ಗಡಿಪೂಜೆ'ಗಳು ಸಾಲು ಸಾಲಾಗಿ ನಡೆಯತ್ತವೆ. ಕೆಲವು ಊರುಗಳಲ್ಲಿ ಇದನ್ನು 'ಹೊಳೆಹಬ್ಬ'ಎಂತಲೂ ಅಚರಿಸುತ್ತಾರೆ. ಮಳೆಗಾಲದಲ್ಲಿ ಬರುವ ಇತರೆ ಧಾರ್ಮಿಕ ಹಬ್ಬಗಳಂತೆ ಈ ಹಬ್ಬವನ್ನು ಸಹ ಉತ್ಸಾಹದಿಂದ ಅದ್ದೂರಿಯಾಗಿ ಆಚರಿಸುತ್ತಾರೆ. ಹೊಳೆಹಬ್ಬ ಮತ್ತು ಗಡಿಪೂಜೆಯ ಆಚರಣೆಯಲ್ಲಿ ಸ್ವಲ್ಪ ಪ್ರಮಾಣದ ಭಿನ್ನತೆಯನ್ನು ಕಾಣಬಹುದು. ಹೊಳೆಹಬ್ಬದಲ್ಲಿ ಹೊಳೆಯ ಬದಿಯಲ್ಲಿ ಬಾಳೆದಿಂಡು ಮತ್ತು ತೆಂಗಿನ ಬಿಳಿಗರಿ ಇತ್ಯಾದಿಗಳನ್ನು ಬಳಸಿಕೊಂಡು ದೊಡ್ಡ 'ಬಲಿ'ಯನ್ನು ಮಾಡುತ್ತಾರೆ. ಆ ಬಲಿಗೆ ಊರಿನ ಎಲ್ಲರೂ ತಮ್ಮತಮ್ಮ ಕೋಳಿಗಳನ್ನು ಬಲಿಕೊಟ್ಟು ನಂತರ ಮನೆಯಲ್ಲಿ ಕೋಳಿಯ ಊಟವನ್ನು ಮಾಡುವುದು ಸಂಪ್ರದಾಯ.

ಇಲ್ಲಿ ಕೋಳಿಯುನ್ನು ಹೊಳೆಬದಿಯಲ್ಲಿ ಬಲಿಕೊಡುವ ರೂಢಿಯಿರುವುದರಿಂದ ಈ ಹಬ್ಬವನ್ನು 'ಹೊಳೆಹಬ್ಬ' ಎಂದು ಕರೆಯುತ್ತಾರೆ. ಜೊತೆಗೆ ಇದು 'ಜಲಸಂಸ್ಕೃತಿ'ಯ ಭಿನ್ನ ಚಹರೆಯೂ ಆಗಿರಬಹುದು. ಗಡಿಪೂಜೆ ಇದಕ್ಕಿಂತ ಭಿನ್ನವಾದುದು. ಒಂದು ಗ್ರಾಮದಲ್ಲಿ ದಾಯಾದಿ ಸಂಬಂಧದ ಹಲವು ಮನೆಗಳಿದ್ದರೆ ಅವರೆಲ್ಲಾ ಸೇರಿ ಗಡಿಪೂಜೆಗೆ ಪೂರಕವಾದ ಒಂದು ದಿನವನ್ನು ನಿಗದಿ ಮಾಡಿಕೊಂಡರೆ,

ದಾಯಾದಿಗಳಿಲ್ಲದ ಮನೆಗಳಿದ್ದರೆ ತಮ್ಮ ಅನುಕೂಲಕ್ಕೆ ಯಾವುದಾದರೂ ಒಂದು ದಿನದಲ್ಲಿ ಗಡಿಪೂಜೆಯನ್ನು ಮಾಡುತ್ತಾರೆ. ಇದಕ್ಕೆ ಊರವರನ್ನು, ಸಂಬಂಧಿಕರನ್ನು ಹಾಗೂ ಸ್ನೇಹಿತರನ್ನು ಊಟಕ್ಕೆ ಕರೆಯುತ್ತಾರೆ. ಈ ಪೂಜೆಯ ದಿನ ಮನೆಯ ಯಜಮಾನ ತನ್ನ ಪೂರ್ವಿಕರು ಇಲ್ಲಿಯವರೆಗೆ ಆಚರಿಸಿಕೊಂಡು ಬಂದಿರುವ ಪರಂಪರೆಯಂತೆ ಬಲಿಯನ್ನು ಬಾಳೆಯ ದಿಂಡಿಂದ ಮಾಡಿ ಅದಕ್ಕೆ ತೆಂಗಿನ ಗರಿಗಳನ್ನು ಪೋಣಿಸಿ, ಕುಂಕುಮ–ಅರಿಶಿನದ ನೀರನ್ನು ಹಾಕಿ ತೆಂಗಿನ ಮರದ ಕಡ್ಡಿಗೆ ಬಟ್ಟೆಯನ್ನು ಸುತ್ತಿ ಮಾಡಿದ 'ದೊಂದಿ'ಯನ್ನು ಹಚ್ಚಿ ಬಲಿಗೆ ಅವಶ್ಯವಿರುವ ಪರಿಕರಗಳನ್ನು ಸಿದ್ಧಮಾಡಿ.

ಬಲಿಸ್ಥಳವನ್ನು ಸ್ವಚ್ಛಗೊಳಿಸುತ್ತಾನೆ. ಕೋಳಿಗಳನ್ನು ಬಲಿಕೊಡುವಾಗ ಗಂಡು ದೆವ್ವಗಳಿಗೆ ಕೋಳಿಹುಂಜವನ್ನು ಹಣ್ಣು ದೆವ್ವಗಳಿಗೆ ಕೋಳಿಹೆಂಟೆಯನ್ನೆ ಬಲಿಕೊಡುತ್ತಾರೆ. ಇಲ್ಲಿನ ಒಂದು ಗಮನಾರ್ಹ ಸಂಗತಿಯೆಂದರೆ ದೆವ್ವಗಳಲ್ಲಿ ಗಂಡಿಗಿಂತ ಹೆಣ್ಣೆ ಪ್ರಬಲವಾಗಿರುತ್ತದೆ. ಗಂಡುದೆವ್ವವನ್ನು 'ರಾಹು' ಎಂದರೆ, ಹಣ್ಣು ದೆವ್ವವನ್ನು 'ಮೃತ್ಯು' ಎಂದು ಕರೆಯುತ್ತಾರೆ. ರಾಹುಗಳಿಗೆ ಸಂಬಂಧಿಸಿದ ಬಲಿಯುನ್ನು ನೆಲಕ್ಕಿರಿಸದೆ ಚಿಕ್ಕ ಅಟ್ಟಣಿಗೆಯನ್ನು ಮಾಡಿ ಅದರ ಮೇಲೆ ಇಡುತ್ತಾರೆ. ಈ ಎಲ್ಲಾ ಆಚರಣೆಗಳು ಸಾಯಂಕಾಲದ ವೇಳೆಗೆ ನಡೆಯತ್ತದೆ.

ಇತ್ತೀಚಿನ ದಿನಗಳಲ್ಲಿ ಬದಲಾದ ಜೀವನ ವಿಧಾನ, ಅವಸರದ ಬದುಕು, ಪರ್ಯಾಯ ವಸ್ತುಗಳ ದಾಳಿಗಳಿಂದಾಗಿ ಕೋಳಿ ಸಾಕಾಣಿಕೆ ಮತ್ತು ಕೋಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಚಹರೆಗಳು ಮರೆಯಾಗುತ್ತಿವೆ. ಹಳ್ಳಿಗಳಲ್ಲಿ ಕೋಳಿ ಸಾಕಲು ಅವಶ್ಯವಿರುವ ವಾತಾವರಣ ಮತ್ತು ಜನರ ಕೊರತೆಯಿರುವುದರಿಂದ ಯಾರೂ ಕೋಳಿಯನ್ನು ಸಾಕಲು ಮುಂದಾಗದೆ, ಗಡಿ ಪೂಜೆಗಳಿಗೆ ಕೋಳಿ ಬೇಕಾದರೆ ಸಂತೆಗಳಿಂದ ತರುತ್ತಾರೆ. ಇನ್ನೂ ಕೆಲವರು ಪಾರಂ ಕೋಳಿಗಳನ್ನು ಅನಿವಾರ್ಯವಾಗಿ ಇದಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಆದರೂ ನಮ್ಮ ಬಾಲ್ಯದ ದಿನಗಳಲ್ಲಿ ಕಂಡಿರುವ ಕೋಳಿಯ ಗರಿಗಳನ್ನು ಕಿವಿಗೆಹಾಕಿ ತಿರುಗಿಸುವ ಮಹಿಳೆಯರು, ಕೋಳಿಯ ಮೊಟ್ಟೆಯನ್ನು ಅನ್ನದ ಮಡಿಕೆಯಲ್ಲಿ ಬೇಯಿಸಿ ಮಕ್ಕಳಿಗೆ ತಿನ್ನಲು ಕೊಡುವಾಗ ತಮ್ಮ ತಲೆಕೂದಲಿಂದ ಅದನ್ನು ಸುಂದರವಾಗಿ ಕತ್ತರಿಸಿ ಕೊಟ್ಟ ತಾಯಂದಿರು, ತಾವು ಸಾಕಿದ ಕೋಳಿಯನ್ನು ಮಾರಿ ಅದರಿಂದ ಬಂದಿರುವ ಹಣದಿಂದ ಮನೆಗೆ ಬೇಕಾದ ಪಾತ್ರೆಗಳನ್ನು ತಂದು ಅದರ ಮೇಲೆ ತಮ್ಮ ಗಂಡಂದಿರ ಹೆಸರನ್ನು ಹೆಮ್ಮೆಯಿಂದ ಬರೆಸುತ್ತಿರುವ ಅಜ್ಜಿಯರೂ ಯಾರೂ ಈಗ ನಮ್ಮ ನಡುವೆ ಇರದೆ ಕೇವಲ ನೆನಪಾಗಿ ಉಳಿದಿದ್ದಾರೆ.

ಅಲ್ಲದೆ ಕೋಳಿ ಸಾಕಾಣಿಕೆ ಸಂಸ್ಕೃತಿಯ ಪರೀಧಿಯಿಂದ ದೂರಾಗಿ ಜಾಗತೀಕರಣದ ದಟ್ಟ ಪ್ರಭಾವದಿಂದ ಉದ್ಯಮದ ಸ್ವರೂಪವನ್ನು ಪಡೆದುಕೊಂಡಿದೆ. ಮಾನವನ ಬದುಕಿನೊಂದಿಗೆ ಒಂದು ರೀತಿಯಲ್ಲಿ ಸಾವಯವ ಸಂಬಂಧವನ್ನು ಹೊಂದಿದ್ದ ಕೋಳಿಯ 'ಅಧೀನ ಸಂಸ್ಕೃತಿ' ಕಣ್ಮರೆಯಾಗುತ್ತಿರುವುದು ಯಾಕೆ ಎನ್ನುವ ಜೊತೆಗೆ ಮಾನವ ನಿರ್ಮಿತ ಹಾರುವುದನ್ನು ಮರೆತ ಹಕ್ಕಿಯ ಸಂಸ್ಕೃತಿಯ ಅವಸಾನಕ್ಕೆ ಕಾರಣವಾದ ಹಲವಾರು ಪ್ರಶ್ನೆಗಳಿಗೆ ಮುಂದಿನ ದಿನಗಳಲ್ಲಿ ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಪ್ರ ಸಂ: ಎಚ್. ಜೆ, ಲಕ್ಕಪ್ಪಗೌಡ, ಸಂ: ಹಿ. ಶಿ. ರಾಮಚಂದ್ರೇಗೌಡ ಮತ್ತು ಕೃಷ್ಣಮೂರ್ತಿ ಹನೂರು.. ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ. ಸುವರ್ಣ ಜಾನಪದ – (1,2).
- ದೇ.ಜ.ಗೌ. (2015). ಜಾನಪದ ಅಧ್ಯಯನ, ಡಿ. ವಿ. ಕೆ ಮೂರ್ತಿ ಪ್ರಕಾಶನ, ಮೈಸೂರು,
- ನ ಪುರುಷೋತ್ತಮ ಬಿಳಿಮಲೆ (ಸಂ). (1997). ಜಾನಪದ ಕೈಪಿಡಿ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
- ಶಿವರುದ್ರಪ್ಪ. ಜಿ. ಎಸ್. (1981). ಕರ್ನಾಟಕ ಜಾನಪದ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.